ಮದುವೆಯ ಹುಚ್ಚು ಹಿಡಿಯಿತೊ ಎಂದು ಜನ ಅಪಹಾಸ್ಯ ಮಾಡಿದರು. ಅಚ್ಚರಿ ಎಂದರೆ ಅಕ್ಕು ಬೇಸರಪಟ್ಟರೂ ಮದುವೆಗೆ ಒಪ್ಪಿದ್ದು. ಅವಳ ಮೂಗು ಹಿಡಿದು ಒಪ್ಪಿಸಿದ್ದು ಅವಳ ಅಕ್ಕ ಅಪ್ಪಿಯ ಕಥಾವಳಿ ಮತ್ತು ಮಾಸ್ತರ ದೀನದಯಾಳು ತನ ಎಂಬ ನಿಜ ಅನಂತನನ್ನು ಹಿಡಿದು ಕೆಲವರಿಗೆ ಮಾತ್ರ ತಿಳಿದಿದೆ.

ಹೊಲಿಗೆಯ ಮೆಟ್ಟಿಲನ್ನು ತುಳಿಯುವ ರಭಸದ ಸದ್ದಿನಲ್ಲಿ, ನಿರಂತರ ಗೊಣಗಾಟದಲ್ಲಿ ಅಕ್ಕುನ ಆಕ್ರೋಶ ಇಡೀ ಮೆತ್ತನ್ನು ಅಲುಗಾಡಿಸುತ್ತಿತ್ತು. “ಎನ್ನ ಮೇಲೆ ಸಿಟ್ಟು; ಮಂತ್ರಾಕ್ಷತೆ ಹಾಕ್ತು; ಯಾವಗ್ಲೂ ಪಿರಿಪಿರಿನೆ; ಆಯಿ ಇಟ್ಟಳದಕ್ಕೆ ಒಂದೇ ಮಾತಿಗೆ ಆನು ಒಪ್ಪಿದ್ನಿಲ್ಲೆ ಹೇಳಿ ಸಿಟ್ಟು.” ಪಾಚಣ್ಣ ವೀಳ್ಯದೆಲೆ ಕೊಯ್ಯಲು ಮರ ಹತ್ತಲು ಬೇಕಾದ ಸಾಹಿತ್ಯ–ಬಾಳೆ ನಾರಿನ ತಳೆ ಮತ್ತು ಕಟ್ಟಣ ಮಣೆ–ದುರಸ್ತಿಗೆ ಕೂತ. ತನ್ನ ಸ್ವಾಭಿಮಾನ ಕಾಪಾಡಿಕೊಂಡು ಅವಮಾನದಿಂದ ತಪ್ಪಿಸಿಕೊಳ್ಳಲು ಚಿನ್ಮಕ್ಕಿ ಜನಸಂಪರ್ಕವಿಲ್ಲದ ದ್ವೀಪವಾಗಿದ್ದದ್ದೆ ಅಕ್ಕುಗೆ ವರವಾಗಿ ಪರಿಣಮಿಸಿತ್ತು. ಚಿನ್ಮಕ್ಕಿಗೆ ಸೊಸೆಯಾಗಿ ಬಂದ ಹೊಸದರಲ್ಲಿ ಅಕ್ಕು ಮುಜುಗರದ ಹಲವು ಪ್ರಸಂಗಗಳನ್ನು ನುಂಗಿಕೊಳ್ಳಬೇಕಾಯಿತು; ಮನೆಗೆ ನೆಂಟರ ಜತೆ ಬರುತ್ತಿದ್ದ ಅಪರಿಚಿತ ಅತಿಥಿಗಳು ಪಾಚಣ್ಣನನ್ನು ಅವಳ ಮಾವನೆಂದು ತಿಳಿಯುತ್ತಿದ್ದರು ಮತ್ತು ಚಹಾ ನೀಡುವಾಗ, “ಯಜಮಾನ್ರು ಇಲ್ಯಾ” ಎಂದು ನೇರ ಕೇಳಿ ಬಿಡುತ್ತಿದ್ದರು; ಅವರ ಮುಗ್ಧ ಅಮಾಯಕ ಮಾತು ಕೇಳಲಿಲ್ಲ ಎನ್ನುವಂತೆ ಅಕ್ಕು ಉತ್ತರಿಸದೆ ಒಳಗೆ ನಡೆಯುತ್ತಿದ್ದಳು ಅಥವ, “ಕವಳದ ಪೇಳಿಯಲ್ಲಿ ಅಡಿಕೆ ಇಲ್ಯನಾ” ಎಂದು ಮಾತನ್ನು ಬೇರೆಡೆ ಹೊರಳಿಸುತ್ತಿದ್ದಳು. ಮೊದಲ ಹೆಂಡತಿಯ ಮಗಳೊಂದಿಗೆ ಹೋಗುತ್ತಿದ್ದ ಒಸಗೆಗಳಲ್ಲಿ, “ಇದು ನಿನ್ನ ತಂಗಿಯಾ?” ಎಂದು ಯಾವ ಅನುಮಾನವಿಲ್ಲದೆ ಕೇಳುತ್ತಿದ್ದರು. ಹತ್ತಿರದ ನೆಂಟರು ರಾತ್ರಿ ವಸತಿಗೆ ಉಳಿದಾಗ ಪಾಚಣ್ಣ ಅವರಿಗೆ ಜಗಲಿಗೆ ಹಾಸುತ್ತಿದ್ದ ಹಾಸಿಗೆಯ ಪಕ್ಕ ತನ್ನ ಚಾಪೆ–ಕಂಬಳಿ ಬಿಡಿಸಿ ಮಲಗುತ್ತಿದ್ದ; ಮದುವೆ ಪ್ರಾಯದ ಮಗಳಿರುವಾಗ ಇನ್ನೂ ಹೆಂಡತಿಯ ಜೊತೆ ಮಲಗಲು ಅವನಿಗೆ ಸಂಕೋಚ; ಒಸಗೆ ಮನೆಯಲ್ಲಿ ಕೂರುವುದೇ ಅವಳಿಗೆ ಉಭಯ ಸಂಕಟವಾಗುತ್ತಿತ್ತು; ಅಕ್ಕು ಒಂದು ಕೂಸನ್ನು ಮಾತ್ರ ಹಡೆದು ಯೌವನದ ಮಿಂಚನ್ನು ಬಿಗಿ ಮೈಕಟ್ಟನ್ನು ಇಟ್ಟುಕೊಂಡ, ಹೊಕ್ಕಳ ಕೆಳಗೆ ಶೋಕಿ ಶೈಲಿಯ ಸೀರೆ ಉಡುಗೆಯ ಶೃಂಗಾರದ ತನ್ನ ವಯಸ್ಸಿನ ಲಲನೆಯರ ಜತೆಗಿರುವುದು ಸಹಜವಾಗಿತ್ತು; ಪಾಚಣ್ಣನ ಹೆಂಡತಿ ಎಂದು ಗುರುತಿಸಲ್ಪಟ್ಟಾಗ ಹಳೆ ಮುತ್ತೈದೆಯರ ಸಾಲಲ್ಲಿ ಕೂತು ಉಡುಗೊರೆ, ಹಿರಿಯರ ಗೌರವ ನಮಸ್ಕಾರ ಪಡೆಯುವುದು ಅನಿವಾರ್ಯವಾಗುತ್ತಿತ್ತು; ಸಂಬಂಧ, ಸ್ಥಾನಮಾನದ ಸಮೀಕರಣ ಏರುಪೇರಾಗಿ ಅಕ್ಕು ತನಗಿಂತ ಹಿರಿಯರಿಂದ ಬಹುವಚನದಲ್ಲಿ ಸಂಬೋಧಿಸಿಕೊಳ್ಳುವಂತಾಗುತ್ತಿತ್ತು; ಊಟದ ಪಂಕ್ತಿಯ ಎಂಜಲೆಗಳನ್ನೆತ್ತಿ ನೆಲ ಸಾರಿಸಲು ಸೀರೆ ಸೆರಗನ್ನು ನಡುಗೆ ಬಿಗಿದು ತಯ್ಯಾರಾಗುತ್ತಿದ್ದ ಅಕ್ಕುಗೆ, “ಅತ್ತೆರೇ ನಿಂಗ್ಳದ್ದು ಈ ಕೆಲ್ಸ ಮಾಡೊ ವಯಸ್ಸಲ್ಲ” ಎಂದು ಹಾಳೆಕಡಿ ಕಸಿದು ವಾಪಸ್ ಕಳುಹಿಸುತ್ತಿದ್ದರು; ಪಾಚಣ್ಣನ ವಯಸ್ಸಿನ ಅದೆಷ್ಟು ಜನ ಇನ್ನೂ ಪ್ರಾಯದವರಂತೆ ಇರುವುದನ್ನು ಅವಳು ತಾರಿಬಾಗಿಲಲ್ಲಿ ನೋಡಿಲ್ಲ; ಪಾಚಣ್ಣ ತನ್ನ ಮಾತು, ವೇಷ, ವರ್ತನೆಯ ದೆಸೆಯಿಂದಾಗಿಯೇ ಅಕಾಲ ವೃದ್ಧಾಪ್ಯವನ್ನು ತಂದುಕೊಂಡಿದ್ದಾನೆಂದು ಅವಳ ಕೊರಗು; ಅವಳೆಷ್ಟು ಹಟ ಮಾಡಿದರೂ ಅವನು ತಲೆಯ ಸುಳಿಯಲ್ಲಿದ್ದ ಜುಟ್ಟನ್ನು ತೆಗೆಯಲಿಲ್ಲ; ಕಿವಿ ಒಂಟಿ ಕಳಚಲಿಲ್ಲ; ಪ್ಯಾಂಟು ಅಭ್ಯಾಸವಿಲ್ಲದಿದ್ದರೆ ಆ ಗಲೀಜು ಅಡ್ಡ ಪಂಜಿ ಉಡುವುದನ್ನ ಬಿಟ್ಟು ಲಕ್ಷಣವಾಗಿ ಬಿಳಿ ಲುಂಗಿ ಸುತ್ತ ಬಾರದೆ ಎಂದು ವಾದಿಸಿದರೂ ಪ್ರಯೋಜನವಾಗಲಿಲ್ಲ; ಬಲಗೈಗೆ ಸುತ್ತಿರುವ ಬಣ್ಣಗೆಟ್ಟ ಕಾಶೀದಾರ ಬಿಚ್ಚಿಸಲಾಗಲಿಲ್ಲ; ಮಿಂದು ಒದ್ದೆ ಒರೆಸಿ ಅಂಗೋಸ್ತ್ರ ಬದಲಾಯಿಸುವಾಗ ಬಚ್ಚಲ ಗೋಡೆಗೆ ಮುಖ ಹಾಕಿ ಹಿಂದೆ ಯಾರಿದ್ದರೂ ಗಮನಿಸದೆ ಬೆತ್ತಲ ಕುಂಡೆ ತೋರಿಸುವುದು ಲಜ್ಜೆಯ ವಿಷಯ ಎಂದು ಗಂಡನಿಗೆ ಮನದಟ್ಟು ಮಾಡಲಾಗದೆ ಸೋತು ಸುಮ್ಮನಾಗಿದ್ದಳು.